ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ, ದಿನಾಂಕ ೧೧ನೇ ಜೂನ್ ೧೯೮೦, ಜ್ಯೇಷ್ಠ ೨೧, ೧೯೦೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧–೧೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ)ಅವರು ಪೀಠವನ್ನು ಅಲಂಕರಿಸಿದರು.]

ರಾಜ್ಯದಲ್ಲಿ ರೈತರ ಸಾಲ ಮನ್ನಾ ಮಾಡುವ ಬಗ್ಗೆ

(ಭಾರತೀಯ ಜನತಾ ಪಕ್ಷದ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪ ನವರು ಸಭೆ ಪ್ರಾರಂಭವಾಗುವುದಕ್ಕೆ ಮೊದಲೇ ಮಾತನಾಡಲು ಪ್ರಾರಂಭಿಸಿದರು.)

ಅಧ್ಯಕ್ಷರು.—ನಾನು ಸಭೆಯನ್ನು ಇನ್ನೂ ಪ್ರಾರಂಭಿಸಿಲ್ಲ ನಾನು ಸಭೆಯನ್ನು ಪ್ರಾರಂಭ ಮಾಡುವುದಕ್ಕೆ ಮೊದಲು ಯಾವುದೇ ಸದಸ್ಯರು ಏನೇ ಹೇಳಿದರೂ ಅದು ಅಧಿಕೃತ ಕಡತಕ್ಕೆ ಹೋಗತಕ್ಕಂಥ ಅವಕಾಶ ಇಲ್ಲ. ಈಗ ಪ್ರಶ್ನೆಗಳು.

ಶ್ರೀ ಕೆ.ಎಸ್. ಈಶ್ವರಪ್ಪ —ಕೈಮುಗಿದು ಕೇಳಿಕೊಳ್ಳುತ್ತಿದ್ದೇವೆ, ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಕರ್ನಾಟಕದ ರೈತ ಭಾರತದ ರೈತ ಎಂದು ಭೇದ ಮಾಡುವುದು ಸರಿಯಲ್ಲ.....

ಅಧ್ಯಕ್ಷರು.—ಪ್ರಶ್ನೆಗಳನ್ನು ಬದಿಗೊತ್ತುವುದಕ್ಕೆ ಸಾಧ್ಯ ಇಲ್ಲ. ಈಗಾಗಲೇ ಒಂದು ಸಲ ಪ್ರಶ್ನೆಗಳನ್ನು ಬದಿಗೊತ್ತಲಾಗಿದೆ. ಎಷ್ಟು ಸಲ ಬದಿಗೊತ್ತುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಯಾವುದೇ ಪೂರ್ವ ಸೂಚನೆ ಕೊಡದೆ, ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಕಾಂಗ್ರೆಸ್ ತೀರ್ಮಾನ ತೆಗೆದುಕೊಂಡಿದೆ. ಆ ಪಕ್ಷದ ಅಧಿಕೃತ ಸರಕಾರ ಇಲ್ಲಿ ಇರುವಾಗ ಇವರ ನಿಲುವು ಏನು? ಕೇಂದ್ರ ಸರಕಾರದ ಯೋಜನೆ ಸರಿಯಿಲ್ಲ ಎಂದು ಬೇರೆ ಬೇರೆ ರಾಜ್ಯಗಳ ಸರಕಾರಗಳು ಕೇಂದ್ರ ಸರಕಾರಕ್ಕೆ ಪೂರಕ ಯೋಜನೆಯನ್ನು ಮಾಡಿ ಕಳುಹಿಸಿವೆ

– ಗೊಂದಲ –

ಶ್ರೀ ಕೆ. ಎಸ್. ಈಶ್ವರಪ್ಪ.—ಈ ಸರಕಾರಕ್ಕೆ ಸ್ವಲ್ಪವಾದರೂ ಜವಾಬ್ದಾರಿ ಇಲ್ಲವೇ? ಮಂತ್ರಿಗಳಿಗೆ ಕೇಳಿರಿ.

ಅಧ್ಯಕ್ಷರು.—ಮಾನ್ಯ ಇದಿನಬ್ಬನವರು ಪ್ರಶ್ನೆ ಕೇಳಬೇಕು, ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಬಿ.ಎಂ. ಇದಿನಬ್ಬ.—೩೬ನೇ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಮಾನ್ಯ ಸಭಾಧ್ಯಕ್ಷರೇ, ಮನ್ಯಾನ್ಯ ಸದಸ್ಯರಿಗೆ ಉತ್ತರಗಳನ್ನು ಕಳುಹಿಸಿಕೊಡಲಾಗಿದೆ.

(ಗೊಂದಲ)

(ಮಾನ್ಯ ಸದಸ್ಯರು ಕೇಳುತ್ತಿದ್ದ ಉಪಪ್ರಶ್ನೆಗಳು ಕೇಳಿಸಲಿಲ್ಲ. ಸದನದಲ್ಲಿ ನಾಲ್ಕಾರು ಜನ ಮಾನ್ಯ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್.—ರೈತರ ಸಮಸ್ಯೆ ಬಗೆ ಹರಿಸುವ ಸಲುವಾಗಿ ಧರಣಿ ಕುಳಿತು ಕೊಳ್ಳತಕ್ಕಂಥ ವಾತಾವರಣ ಸೃಷ್ಟಿಯಾಗಿದೆ. ಇದನ್ನು ಏನಾದರೂ ಮಾಡಿ ತಪ್ಪಿಸಬೇಕು. ಪಕ್ಷ

ಯಾವುದೇ ಇರಲಿ, ನೀತಿ ಯಾವುದೇ ಇರಲಿ ಸಭೆಯಲ್ಲಿ ಇಂತಹ ಒಂದು ವಾತಾವರಣ ನಿರ್ಮಾಣವಾಗಿ ಬಾರದು. ರಾಜ್ಯದ ರೈತರ ಕಳಕಳಿಯನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು.

– ಗೊಂದಲ –

ಶ್ರೀ ಕೆ.ಎಸ್. ಈಶ್ವರಪ್ಪ.—ರೈತರ ಕಳಕಳಿಯನ್ನು ಅರ್ಥ ಮಾಡಿಕೊಳ್ಳಬೇಕು, ಇದರ ಬಗ್ಗೆ ಸರಕಾರ ತೀರ್ಮಾನ ಮಾಡಲಿ

– ಗೊಂದಲ –

ಶ್ರೀ ವಾಟಾಳ್ ನಾಗರಾಜ್.—ಇದರ ಬಗ್ಗೆ ಕೇಂದ್ರಕ್ಕೆ ಸರ್ವಪಕ್ಷಗಳ ನಿಯೋಗ ಹೋಗುವುದಕ್ಕೆ ವ್ಯವಸ್ಥೆ ಮಾಡಿ. ಈ ಒಂದು ಧರಣಿಯನ್ನು ನಿಲ್ಲಿಸಿ.

– ಗೊಂದಲ –

ಶ್ರೀ ಟಿ.ಎನ್. ನರಸಿಂಹಮೂರ್ತಿ.—೧೯೮೮-೮೯ ರಲ್ಲಿ ೫೫.೫೯ ಲಕ್ಷ ರೂ.ಗಳ ಆದಾಯ ದೊರಕಿದ್ದು, ಇದು ೧೯೮೯-೯೦ ರಲ್ಲಿ ೪೨.೬೦.೬೧ ಲಕ್ಷ ರೂ.ಗಳಿಗೆ ಇಳಿದಿದೆ. ಇದಕ್ಕೆ ಕಾರಣ ಏನಂ ಎಂದು ಕೇಳುತ್ತಿದ್ದಾರೆ. ದುರ್ದೈವದಿಂದ ಈ ವರ್ಷ ಹೆಚ್ಚು ಉತ್ಪನ್ನವಾದರೂ ಬೇಡಿಕೆ ಕಡಿಮೆಯಾದುದರಿಂದ ಬಹುಶಃ ಸಹಜವಾಗಿ ಆದಾಯ ಕಡಿಮೆಯಾಗಿದೆ ಎಂಬುದನ್ನು ನಿಮ್ಮ ಮುಖಾಂತರ ಹೇಳುತ್ತೇನೆ.

– ಗೊಂದಲ –

ಶ್ರೀ ವಾಟಾಳ್ ನಾಗರಾಜ್.—ಅವರನ್ನು ಕರೆಸಿ ಮಾತನಾಡಬೇಕೆಂದು ಸಲಹೆ ಮಾಡುತ್ತೇನೆ. ಮೊನ್ನೆ ಅವರು ತೀರ್ಮಾನ ತೆಗೆದುಕೊಂಡಿದ್ದಾರೆ. ಏನೆಂದರೆ ಇಡೀ ಸದನವು ಮುಗಿಯುವವರೆಗೆ ಸತ್ಯಾಗ್ರಹ ಮಾಡುತ್ತೇವೆಂದು. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ, ತಾವು ಅವರನ್ನು ಕರೆಸಿ ಮಾತನಾಡಿ, ಒಂದು ತಿಳಿ ವಾತಾವರಣ ಬರಲಿ. ಈ ರಾಷ್ಟ್ರದಲ್ಲಿ ಅನೇಕ ಸರ್ಕಾರಗಳು ಈ ಸಾಲ ಮನ್ನಾ ಮಾಡಲು ಒಪ್ಪಿಕೊಂಡಿದ್ದಾರೆ. ಕರ್ನಾಟಕ ಸರ್ಕಾರದ ನೀತಿಯ ಬಗ್ಗೆ ಈ ವಿಷಯದಲ್ಲಿ ಅವರು ಕೇಳಿಕೊಳ್ಳುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಇದಕ್ಕೆ ಒಂದು ಸೂತ್ರ ಕಂಡುಹಿಡಿಯಿರಿ. ಅವರನ್ನು ಮಾತುಕತೆಗೆ ಕರೆಸಿ,

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಈಗ ೧೦ ಜನರು ಕೂಡಿ ಮಾತನಾಡುತ್ತಿದ್ದಾರೆ, ತಾವು ಅವರೆಲ್ಲರನ್ನೂ ಕರೆದಿದ್ದೀರಾ?

ಅಧ್ಯಕ್ಷರು.—ಇಲ್ಲ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್.—ಜಗತ್ತಿನ ಜನ ನೋಡುತ್ತಿದ್ದಾರೆ. ಕರ್ನಾಟಕದ ಸದನ ಸ್ವಲ್ಪವಾದರೂ ಮಾನ ಮರ್ಯಾದೆ ಕಲಿಯಬೇಕಾಗುತ್ತದೆ.

ಅಧ್ಯಕ್ಷರು.—ನಾನು ಕರೆಯದೆ ಯಾರೂ ಸಹ ಮಾತನಾಡಲು ಅವಕಾಶವಿಲ್ಲ. ನೀವು ಈ ಸದನದಲ್ಲಿರುವವರಿಗೆ ನಾನು ಹೇಳಿದಂತೆ ಕೇಳಲೇಬೇಕಾಗುತ್ತದೆ.

ಶ್ರೀ ಕೆ. ಎಸ್. ಈಶ್ವರಪ್ಪ.—ವಿಂಡಿತವಾಗಿ ಕೇಳುತ್ತೇನೆ. ನಮಗೆ ನಿಮ್ಮ ಬಗ್ಗೆ ಗೌರವವಿದೆ.

ಅಧ್ಯಕ್ಷರು.—ನಿಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಸಾಕಾದಷ್ಟು ಅವಕಾಶಗಳನ್ನು ಈ ಸಭೆಯಲ್ಲಿ ಕೊಟ್ಟಿದ್ದೇನೆ. ಮಾನ್ಯ ಸದನದ ಸದಸ್ಯರು ಕೆಲವರು ನಾನು ಬಿ.ಜೆ.ಪಿ ಪಕ್ಷದ ನಾಯಕರನ್ನು ಕರೆದು ಮಾತನಾಡಬೇಕೆಂಬ ಸೂಚನೆಯನ್ನು ಕೆಲವರು ಕೊಡುತ್ತಿದ್ದರು, ಗುರುವಾರ ಅಥವಾ ಶುಕ್ರವಾರ ಆದೇ ಪ್ರಕಾರವಾಗಿ ನಾನು ಮಾನ್ಯ ಸದಸ್ಯರನ್ನು ಕರೆದು ಸರ್ಕಾರದ ಪ್ರತಿನಿಧಿಗಳನ್ನು ಕರೆದು ಬಿಜಿನೆಸ್ ಅಡ್ವೈಸರಿ ಕಮಿಟಿಯ ಮುಂದೆ ಇದನ್ನು ಪ್ರಸ್ತಾಪ ಮಾಡಿದ್ದೇನೆ. ನಾನು ಅವರಿಗೆ ಮನವಿಯನ್ನು ಕೂಡ ಮಾಡಿದ್ದೇನೆ. ತಾವು ದಯವಿಟ್ಟು ಈ ಧರಣದ ಏನು ಪ್ರಯತ್ನ ನಡೆದಿದೆ ಅದನ್ನು ಕೈ ಬಿಡಬೇಕು. ಇದನ್ನು ಯಾವ್ಯಾವ ವೇದಿಕೆ ಸಿಗುತ್ತದೆ, ಅವಕಾಶ ಸಿಗುತ್ತದೆ, ಅಲ್ಲೆಲ್ಲ ಈ ಪ್ರಜ್ಞಲಿತವಾದ ಸಮಸ್ಯೆಯನ್ನು ಚರ್ಚೆಗೆ ತೆಗೆದುಕೊಳ್ಳಬಹುದೆಂದು ಹೇಳಿದೆ. ಆದರೆ ಮುನೆ ಮೊನ್ನೆಯ ದಿವಸ ಮಾನ್ಯ ಬಿ.ಜೆ.ಪಿ ಪಕ್ಷದ ನಾಯಕರು ಮತ್ತೆ ಈ ಸದನದ ಮುಂದೆ ಧರಣಿಯನ್ನು ಮಾಡುತ್ತೇವೆಂದು ಹೇಳಿ ಒಳಗಡೆ ಬಂದು ನಿಂತಿದ್ದಾರೆ. ನಾನು ಸಭಾಧ್ಯಕ್ಷನಾಗಿ ಏನು ಮಾಡ

ಬೇಕೆಂಬುದನ್ನು ತಾವುಗಳು ಪರ್ಯಾಲೋಚಿಸಿ ಪ್ರಶ್ನೋತ್ತರ ವಾದ ಮೇಲೆ ನೀವು ನನಗೆ ಹೇಳ ಬಹುದು.

ಶ್ರೀ ಕೆ. ಎಸ್. ಈಶ್ವರಪ್ಪ.—ಮಧ್ಯ ಪ್ರದೇಶದಲ್ಲಾಗಿದೆ. ರಾಜಾಸ್ಥಾನ ದಲ್ಲಿ ಆಗಿದೆ. ಆದರೆ ಕಾಂಗ್ರೆಸ್‌ನವರು ಇಲ್ಲಿ ಚಿಳ್ಳೆಪಿಳ್ಳೆ ಮಾಡಲು ಹೊರಟ್ಟಿದ್ದಾರೆ.

(ಗೊಂದಲ)

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಇದು ಬಹಳ ವಿಪರೀತ ಆಯಿತು.

ಅಧ್ಯಕ್ಷರು.—ಈಗ ಸಂದೀಯ ವ್ಯವಹಾರದ ಮಂತ್ರಿಗಳು ಮಾತನಾಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ — ಮಾನ್ಯ ಅಧ್ಯಕ್ಷರೇ, ಈಗ ಈ ಸದನದಲ್ಲಿ ಅನೇಕ ಅನುಭವಿ ಶಾಸಕರು ಇದ್ದಾರೆ. ಹಾಗೂ ಹಿರಿಯರು ಇದ್ದಾರೆ, ಹೀಗಿರುವಾಗ ಈ ಪ್ರಶ್ನೋತ್ತರ ವೇಳೆಗೆ ಯಾರೇ ಆಗಲೀ ಅಡ್ಡಿ ಮಾಡುವುದು ಸರಿಯಲ್ಲ. ಈ ಪ್ರಶ್ನೋತ್ತರ ವೇಳೆ ಎಂದರೆ ಇದು ಅತ್ಯಂತ ಪವಿತ್ರವಾದ ಸ್ಥಾನವನ್ನು ಹೊಂದಿರತಕ್ಕಂಥ ಒಂದು ಅವಧಿ ಏತಕ್ಕೆಂದರೆ ಇವತ್ತು ಈ ಪ್ರಶ್ನೆಗಳು ಈ ಕರ್ನಾಟಕ ರಾಜ್ಯದ ಜನರ ಹಿತಕ್ಕೆ ಸಂಬಂಧಪಟ್ಟದ್ದು. ಇದನ್ನು ಯಾವುದೇ ಕಾರಣಕ್ಕೂ ಅಡ್ಡಿ ಮಾಡಬಾರದು ಇದು ಸದನದ್ದು ಹಾಗೂ ಸದಸ್ಯರುಗಳ ಮೂಲ ಭೂತ ಹಕ್ಕು. ಹಾಗೂ ಸದಸ್ಯರುಗಳ ಮೂಲಕ ಜನರು ಈ ಹಕ್ಕನ್ನು ಚಲಾಯಿಸುತ್ತಾರೆ. ಇದನ್ನು ಹತ್ತಿಕ್ಕುವ ಪ್ರಯತ್ನ ಏನು ನಮ್ಮ ಮಾನ್ಯ ಸದಸ್ಯರು ಮಾಡುತ್ತಿದ್ದಾರೆ ಇದು ಸರಿಯಲ್ಲ. ಸನ್ಮಾನ್ಯ ಬಿ.ಜೆ.ಪಿ ಸದಸ್ಯರಾದ ಈಶ್ವರಪ್ಪನವರು ಹೊಸಬರಿದ್ದಾರೆ. ಅವರಿಗೆ ಸ್ವಲ್ಪ ಸಂಯಮ ಯಾವಾಗಲೂ ಬೇಕು. ಸಂಯಮವಿದ್ದರೆ ಕಟ್ಟಿ ಹೊಡೆದುಕೊಂಡು ಹೋದರೆ ಅದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಈ ಸದನಕ್ಕೆ ಕೆಲವು ಸಜ್ಜನಿಕೆಗಳಿವೆ ಕೆಲವು ಸಂಯಮತೆ ಬೇಕಾಗುತ್ತದೆ. ಸಮಸ್ಯೆಗಳು ಎಷ್ಟೆ ಗಂಭೀರವಾಗಿದ್ದರೂ ಅದು ಎಷ್ಟೇ ಜ್ವಾಲಾಮುಖಿತರಹ ದೊಡ್ಡ ಸಮಸ್ಯೆ ಇರಬಹುದು,

ಆದರೆ ಅದನ್ನು ಯಾವ ಕಾಲದಲ್ಲಿ ಎತ್ತಬೇಕು ಯಾವ ರೀತಿಯಲ್ಲಿ ಎತ್ತಬೇಕು ಅದನ್ನು ಮಾನ್ಯ ಸದಸ್ಯರು ಸರಿಯಾಗಿ ತಿಳಿದುಕೊಳ್ಳಬೇಕಾಗುತ್ತದೆ. ಕೆಲವೊಂದು ಸಾರಿ ಧರಣಿ ಸಹ ಮಾಡಬೇಕಾಗುತ್ತದೆ. ಧರಣಿ ಯಾವಾಗ ಮಾಡಬೇಕು? ನಾವು ಸಹ ಆ ಕಡೆ ಇದ್ದಾಗ ಧರಣಿ ಮಾಡಿದ್ದೇವೆ. ಯಾವುದಾದರೂ ಒಂದು ವಿಷಯವನ್ನು ಎಲ್ಲಿಯವರೆಗೆ ಕೊಂಡೊಯ್ಯಬಹುದು, ಎಲ್ಲಿಯವರೆಗೆ ತರಬಹುದು ಎನ್ನುವುದಕ್ಕೆ ಒಂದು ಸಂಯಮ ಇರಬೇಕಾಗುತ್ತದೆ. ಅದಕ್ಕೆ ನಾವು ಒಂದು ಸಂಯಮ ಹಾಕದಿದ್ದರೆ ಬಹುಶಃ ಈ ರಾಜ್ಯದ ಜನತೆಗೆ ಅನ್ಯಾಯ ಮಾಡಿದಂತಾಗುತ್ತದೆ. ನಾವು ಈ ಸದನದ ಕಾರ್ಯಕಲಾಪಗಳಿಗೆ ತೊಂದರೆ ಮಾಡಿದಂತಾಗುತ್ತದೆ. ಆದ್ದರಿಂದ ಸನ್ಮಾನ್ಯ ಸದಸ್ಯರು ಈ ರೀತಿ ತೊಂದರೆ ಮಾಡುವುದಾದರೆ ಯಾರಿಗೂ ರಕ್ಷಣೆ ಸಿಗುವುದಿಲ್ಲ. ಆ ಕಡೆಯ ಮಾನ್ಯ ಸದಸ್ಯರಿಗೂ ರಕ್ಷಣೆ ಸಿಗುವುದಿಲ್ಲ ಈ ಕಡೆಯ ಮಾನ್ಯ ಸದಸ್ಯರಿಗೂ ರಕ್ಷಣೆ ಸಿಗುವುದಿಲ್ಲ. ರಕ್ಷಣಾ ವಿರಹಿತವಾದ ಪರಿಸ್ಥಿತಿಯಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಇದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಮಾನ್ಯ ಸದಸ್ಯರಿಗೂ ಪ್ರಯೋಜನವಾಗುವುದಿಲ್ಲ. ಆ ಕಡೆಯ ಸದಸ್ಯರಿಗೂ ಪ್ರಯೋಜನವಾಗುವುದಿಲ್ಲ ಈ ಕಡೆಯ ಮಾನ್ಯ ಸದಸ್ಯರಿಗೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ನಾವು ಒಂದು ಸಂಯಮವನ್ನು ಈ ಸದನದಲ್ಲಿ ಇಟ್ಟುಕೊಂಡರೆ ಆಗ ಈ ಸದನದ ಕಾರ್ಯಕಲಾಪಗಳು ಸಜ್ಜನಿಕೆಯ ಶರಣಾಗತಿಗೆ ಹೊಂದಿಕೊಂಡು ನಾವು ಕೆಲಸ ಮಾಡಿದರೆ ರಾಜ್ಯದ ಜನತೆಗೆ ಒಳ್ಳೆಯದಾಗುತ್ತದೆ. ಆಗ ಆ ಜನತೆಯ ಹಿತಾಸಕ್ತಿಯನ್ನು ಸಹ ಮತ್ತು ಮಾನ್ಯ ಸದಸ್ಯರ ಹಿತಾಸಕ್ತಿಯನ್ನು ಕಾಪಾಡಿದಂತೆ ಆಗುತ್ತದೆ. ಇಲ್ಲದಿದ್ದರೆ ಯಾರ ಹಿತಾಸಕ್ತಿಯೂ ಸಾಧನೆಯಾಗುವುದಿಲ್ಲ ಎಂದು ನಾನು ಏನಯದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಈಗ ಇಲ್ಲಿ ೨೦ ಪ್ರಶ್ನೆಗಳು ಇವೆ. ಮಾನ್ಯ ಸದಸ್ಯರು ಈ ರೀತಿ ಮಾಡಿದರೆ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ.

(ಗೊಂದಲ)

ತಾವು ಸಭಾಧ್ಯಕ್ಷರನ್ನು ಆಕ್ಷೇಪಣೆ ಮಾಡಿದರೆ ಏನೂ ಫಲ ಸಿಗುವುದಿಲ್ಲ. ಪ್ರಶ್ನೋತ್ತರ ವೇಳೆಯಲ್ಲಿ ಈ ರೀತಿ ಸದನದ ಗಮನವನ್ನು ಬೇರೆ ಕಡೆ ಸೆಳೆಯುವುದು ಸರಿಯಲ್ಲ. ತಾವು ಈ ರೀತಿ ಸಂಯಮವನ್ನು ಬೇರೆಯದಕ್ಕೆ ಉಪಯೋಗಿಸಿಕೊಂಡರೆ ಪ್ರಶ್ನೋತ್ತರ ವೇಳೆ ಕಡಿಮೆಯಾಗುತ್ತದೆ. ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ.—ಮಾನ್ಯ ಅಧ್ಯಕ್ಷರೇ ತಮ್ಮ ಮೇಲೆ ನಮಗೆ ಗೌರವ ಇದೆ. ಆದರೆ ಈ ಸರ್ಕಾರಕ್ಕೆ ನಾವು ೬ ತಿಂಗಳುಗಳಿಂದ ಹೇಳುತ್ತಿದ್ದೇವೆ. ಈ ಸರ್ಕಾರಕ್ಕೆ ಕಿವಿ ಇಲ್ಲ.....

(ಗೊಂದಲ)

ಅಧ್ಯಕ್ಷರು.—ಮಾನ್ಯ ಈಶ್ವರಪ್ಪನವರೇ ನಾನು ತಮಗೆ ಕೊನೆಯದಾಗಿ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ ಈ ಸರ್ಕಾರಕ್ಕೆ ಕಿವಿ ಇದೆ. ಹೃದಯ ಇದೆ ರೈತರ ಬಗ್ಗೆ ಅನುಕಂಪ ಇದೆ ರೈತರ ಬಗ್ಗೆ ಕಳಕಳಿ ಇದೆ ಎಂದು ನಾನು ಸ್ಪಷ್ಟವಾಗಿ ಮಾನ್ಯ ಸದಸ್ಯರಿಗೆ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ.—ಇವರದ್ದು ಬರೀ ಮಾತು, ಕೃತಿಯಲ್ಲಿ ಏನು ಆಗಲಿಲ್ಲ. ಇವರು ಕೇಂದ್ರ ಸರ್ಕಾರದ ವಿರುದ್ಧ ಚಳುವಳಿ ಮಾಡಲು ಹೊರಟ್ಟಿದ್ದರು. ಇವರು ಮಾತಿನಲ್ಲಿ ಒಂದು ಹೇಳುವುದು ಕೃತಿಯಲ್ಲಿ ಒಂದು ಮಾಡುವುದು ನಡೆದಿದೆ. ನಿಮ್ಮ ಸರ್ಕಾರ ಈ ಬಗ್ಗೆ ಇಲ್ಲಿ ಏನು ಮಾಡುತ್ತಿದೆ ಎಂದು ನಾನು ಕೇಳುತ್ತಿದ್ದೇನೆ.....

(ಗೊಂದಲ)

ಅಧ್ಯಕ್ಷರು.—ಮಾನ್ಯ ಈಶ್ವರಪ್ಪನವರೇ ತಾವು ಕುಳಿತುಕೊಳ್ಳಬೇಕು. ದಯಮಾಡಿ ತಾವು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ.—ತಮ್ಮ ಬಗ್ಗೆ ನನಗೆ ಗೌರವ ಇದೆ. ದಯಮಾಡಿ ನಮಗೆ ಅವಕಾಶ ಕೊಡಿ.

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ.—ರಾಜ್ಯದ ರೈತರಿಗೆ ನ್ಯಾಯ ಸಿಗಬೇಕು. ಯಾವಾಗ ನ್ಯಾಯ ಸಿಗುತ್ತದೆ ಹೇಳಿ...

ಅಧ್ಯಕ್ಷರು.—ಮಾನ್ಯ ಸದಸ್ಯರು ಮಾತನಾಡಿದ್ದನ್ನು ರೇಕಾರ್ಡ್ ಮಾಡಬೇಡಿ.

* * *

(ಅಧ್ಯಕ್ಷರ ಅಪ್ಪಣೆ ಮೇರೆಗೆ ರೆಕಾರ್ಡ್ ಮಾಡಲಿಲ್ಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ನೀವು ಸಹ ಹೊಸ ಸದಸ್ಯರು ಇಲ್ಲಿ ಅನುಭವಿ ಸದಸ್ಯರು ಇನ್ನೂ ಇದ್ದಾರೆ. ದಯಮಾಡಿ ತಾವು ಸಹ ಕುಳಿತುಕೊಳ್ಳಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ ರೈತರ ಬಗ್ಗೆ ಅವರು ನಾಲ್ಕು ಜನರಿಗೆ ಮಾತ್ರ ಕಳಕಳಿ ಇದೆಯೆಂದು ಹೇಳುತ್ತಿರುವುದು ಸರಿಯಲ್ಲ. ನಮಗೂ ಇದೆ...

ಅಧ್ಯಕ್ಷರು.—ಮಾನ್ಯ ಸದಸ್ಯರು ಮಾತನಾಡಿದ್ದನ್ನು ರೆಕಾರ್ಡ್ ಮಾಡಬೇಡಿ.

* * *

(ಅಧ್ಯಕ್ಷರ ಅಪ್ಪಣೆ ಮೇರೆಗೆ ರೆಕಾರ್ಡ್ ಮಾಡಲಿಲ್ಲ)

ಅಧ್ಯಕ್ಷರು.—ಮಾನ್ಯ ಇದಿನಬ್ಬನವರೇ, ತಾವು ಉಪ ಪ್ರಶ್ನೆ ಕೇಳಿ.

ಶ್ರೀ ಬಿ.ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಜರ್ಸಿನ್ ಬೋಟ್ಸ್ ಮತ್ತು ಟ್ರೋಲರ್‌ಗಳನ್ನು ಒದಗಿಸಿಕೊಡುವುದಕ್ಕೆ ಆರ್ಥಿಕವಾಗಿ ಅನುಕೂಲಕರವಾಗಿಲ್ಲವೆಂದು ಹೇಳಿದ್ದಾರೆ. ಮೊನುಗಾರರು ತುಂಬಾ ಆಳಕ್ಕೆ ಹೋಗಿ ಮೀನು ಹಿಡಿಯಬೇಕಾಗಿರುವುದರಿಂದ ಅವರಿಗೆ ಇವುಗಳನ್ನು ಒದಗಿಸಿದರೆ ಸ್ವಲ್ಪ ಮಟ್ಟಿಗೆ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಇದರಿಂದಾಗಿ ಮೊನುಗಾರರು

* Not recorded as order edby the Chair.

ಆರ್ಥಿಕವಾಗಿ ಮೇಲೆ ಬರುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳುವುದೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಪರ್ಸಿನ್ ಬೋಟ್ಸ್ ಮತ್ತು ಟ್ರೋಲರ್ಸ್‌ಗಳು ಸಾಷ್ಟು ಸಂಖ್ಯೆಯಲ್ಲಿರುವುದರಿಂದ ಮತ್ತೆ ಹೆಚ್ಚಿನ ಸಂಖ್ಯೆಯಲ್ಲಿ ಪರ್ಸಿನ್ ಬೋಟ್ಸ್ ಮತ್ತು ಟ್ರೋಲರ್ಸ್‌ಗಳನ್ನು ಇಟ್ಟುಕೊಂಡರೆ ಅನಾನುಕೂಲವಾಗಿ ಅವರ ಆರ್ಥಿಕ ಪರಿಸ್ಥಿತಿ ಕುಗ್ಗಬಹುದು ಎನ್ನುವ ದೃಷ್ಟಿಯಿಂದ ಅದನ್ನು ಸರ್ಕಾರ ಪರಿಶೀಲನೆಗೆ ತಗೆದು ಕೊಂಡಿಲ್ಲ. ಮಾನ್ಯ ಸದಸ್ಯರು ಈಗ ಏನು ಸೂಚನೆ ಕೊಟ್ಟಿದ್ದಾರೆ ಆ ಬಗ್ಗೆ ನಾವು ತಜ್ಞರ ಅಭಿಪ್ರಾಯವನ್ನು ಪಡೆದು ಅವಶ್ಯಕವಿದ್ದರೆ ಪರ್ಸಿನ್ ಬೋಟ್ಸ್ ಮತ್ತ ಟ್ರೋಲರ್‌ಗಳನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಪ್ರಶ್ನೋತ್ತರಗಳು

ಶಿರೂರು ಮೀನುಗಾರಿಕಾ ಬಂದರಿನ ಅಭಿವೃದ್ಧಿ

೫೫. ಶ್ರೀ ಜಿ. ಎಸ್. ಆಚಾರ್, (ಗೋಪಾಲಕೃಷ್ಣ ಬೈಂದೂರು).—ಮಾನ್ಯ ಬಂದರು ಹಾಗೂ ಮೀನುಗಾರಿಕೆ, ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ದಕ್ಷಿಣ ಕನ್ನಡ ಜಿಲ್ಲೆಯ ಶಿರೂರು ಮೀನುಗಾರಿಕಾ ಬಂದರು ಅಭಿವೃದ್ಧಿಗಾಗಿ ಅನೇಕ ಲಕ್ಷ ಹಣ ವೆಚ್ಚವಾಗಿರುವುದು ಸರ್ಕಾರದಪಕ ಗಮನಕ್ಕೆ ಬಂದಿದೆಯೇ ?

ಆ) ಇದರಿಂದ ಅನೇಕ ಕಾರ್ಮಿಕರಿಗೆ ಉಪಯೋಗವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಇ) ಬ್ರೇಕ್ ವಾಟರ್ ಬೆಳೆಸುವ ಯಾರ್ಡ್‌ನ್ನುಬಗ್ಗೆ ಸರ್ಕಾರವು ಯಾವ ಯೋಜನೆ ಹಾಕಿಕೊಂಡಿದೆ.

ಈ) ಈ ಯೋಜನೆ ಕೆಲಸ ಪೂರ್ತಿ ಯಾವಾಗ ಆಗುವುದು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಮೀನುಗಾರಿಕೆ, ಬಂದರು, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬ್ರೇಕ್ ವಾಟರ್‌ನ್ನು ನಿರ್ಮಾಣ ಮಾಡಲು ಸದ್ಯಕ್ಕೆ ಯಾವ ಯೋಜನೆಗಳು ಇರುವುದಿಲ್ಲ. ೧೯೯೦-೯೧ನೇ ಸಾಲಿನಲ್ಲಿ ಕಡಲ ತೀರದ ಹಳ್ಳಿಗಳಿಗೆ ರಚನಾತ್ಮಕ ಸೌಲಭ್ಯಗಳ ಯೋಜನೆಯಡಿಯಲ್ಲಿ ಮೀನು ಬೆಳೆಸುವ ಯಾರ್ಡ್‌ಗಳನ್ನು ನಿರ್ಮಿಸುವ ಯೋಜನೆ ಇದೆ.

ಈ) ೧೯೯೧ನೇ ಮಾರ್ಚ್ ಒಳಗಾಗಿ ಬೆಳೆಸುವ ಯಾರ್ಡ್‌ನ ಕೆಲಸವನ್ನು ಪೂರ್ತಿಗೊಳಿಸಲಾಗುವುದು.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ನಾನು ಕೇಳುಹಿಸಿದ ಪ್ರಶ್ನೆ ಬದಲಾಗಿದೆ ಎಂದು ನನಗನಿಸತ್ತದೆ. ನಾನು ಕೇಳುಹಿಸಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಭಿವೃದ್ಧಿ ಬಗ್ಗೆ ಆದರೆ ಇಲ್ಲಿ ಬಂದಿರುವುದು ಬಂದರು ಅಭಿವೃದ್ಧಿ ಬಗ್ಗೆ ಅದಕ್ಕಾಗಿ ಈ ಪ್ರಶ್ನೆ ಉದ್ಭವವಾಗುವುದಿಲ್ಲವೆಂದು ನನಗೆ ಉತ್ತರ ಬಂದಿದೆ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಪ್ರಶ್ನೆ ಸಮುದ್ರಕ್ಕೆ ಹೋಯಿತು.

ಸನ್ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದ ಮತಿಯಿಂದ ಅನೇಕ ಯೋಜನೆಗಳು ನಮ್ಮ ಕುಂದಾಪುರ ತಾಲ್ಲೂಕು ಶಿರೂರು ಗ್ರಾಮಕ್ಕೆ ಬೇರೆ ಬೇನೆ ಉದ್ದೇಶಕ್ಕಾಗಿ ಮಂಜೂರಾಗಿದೆ. ಆದರಲ್ಲಿ ವಾಟರ್ ಸಪ್ಲೈ ರೋಡ್ ಫಾರ್ಮೇಷನ್, ಬಂದರು ಅಭಿವೃದ್ಧಿ, ಬ್ಯಾಕ್ ವಾಟರ್ ನಿರ್ಮಾಣ, ಹಾಗೆಯೇ ಒಣಗಿಸುವಂಥ ಯಾರ್ಡ್‌ಗಳ ರಚನೆ. ಆದರೆ ಇದರಲ್ಲಿ ಯಾವುವೂ ಕಾರ್ಯಗತ ಆಗಿಲ್ಲ. ವಾಟರ್ ಸಪ್ಲೈ ಕೆಲಸ ಕೈಗತ ಗೊಂಡಿದೆ. ರಸ್ತೆ ಕೆಲಸ ಪೂರ್ಣವಾಗಿಲ್ಲ. ಐಸ್ ಪ್ಲಾಂಟ್ ನಿರ್ಮಾಣ ಆಗಿದ್ದಾಗಿದೆ. ಆದರೆ ಅದು